ಸದರೀ ದರಖಾಸ್ತುದಾರರಾದ ಯಲೇ ವಿರುಪಾಪ್ಪಯ್ಯನವರ ಅರ್ಜಿಯನ್ನು ಸ್ ೧೮೯೬ನೇ ಇಸವಿ ನವಂಬರ್ ತಿಂಗಳ ತಾರೀಖು ೫ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಯಲೇ ಚನ್ನಬಸಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೮೯೬—97ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 47.

ಮೃತಪಟ್ಟ ಚಿಕ್ಕಬಚ್ಚಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಬೆಂಗಳೂರು ತಾಲ್ಲೂಕು ಬಯ್ಯಪ್ಪನಹಳ್ಳಿಯಲ್ಲಿ ಇರುವ ವೆಂಕಟರಮಣಪ್ಪನು, ಮೃತಪಟ್ಟ ಸದರೀ ಚಿಕ್ಕಬಚ್ಚಪ್ಪನು ಬರದಿಟ್ಟ ವಿಲ್ಲಿನ ಎಗ್ಜಿಕ್ಯೂಟರು ಆಗಬೇಕೆಂಬ ಹಕ್ಕುದಾರಿ ಮೇಲೆ ಬಯ್ಯಪ್ಪನಹಳ್ಳಿ ಸ್ಥಳದ ವೆಂಕಟರಮಣಪ್ಪನು, ಬಯ್ಯಪ್ಪನ ಹಳ್ಳಿ ವಾಸಸ್ಥರಾಗಿ ಮೃತಪಟ್ಟ ಚಿಕ್ಕಬಚ್ಚಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಪ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟರಮಣಪ್ಪನ ಅರ್ಜಿಯನ್ನು 1896ನೇ ಇಸವಿ ನವಂಬರ್ ತಿಂಗಳ ತಾರೀಖು ೫ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿಕ್ಕಬಚ್ಚಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1896ನೇ ಇಸವಿ ಸೆಪ್ಟಂಬರ್ ತಿಂಗಳ 3ನೇ ತಾರೀಖಿನಲ್ಲಿ ಕೋರ್ಟ್ ವೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ನರಹರರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್.

ತಾರೀಖು 2ನೇ ಸೆಪ್ಟಂಬರ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ದೇಶದಲ್ಲಿ ಉತ್ಪತ್ತಿಯಾಗುವ ಗಂಧದ ಸಾಲಿಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಸ್ಥಳಗಳಲ್ಲಿ ಆವುಗಳ ಪಕ್ಕದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರು ಮತ್ತು ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವುವು.

ಡಿಸ್ಟ್ರಿಕ್ಟು.	ಕೋಠಿ ಹೆಸರು.	ಹರಾಜು ತಾರೀಖು.
ಮೈಸೂರು	ಹುಣಸೂರು	28ನೇ ನವೆಂಬರ್ 1896.
ಡಿಟೋ	ಶ್ರೀರಂಗಪಟ್ಟಣ	1ನೇ ಡಿಸೆಂಬರ್ ,,
ಬೆಂಗಳೂರು	ಬೆಂಗಳೂರು	4ನೇ ಡಿಟೋ ,,
ಹಾಸನ	ಹಾಸನ	7ನೇ ಡಿಟೋ ,,
ಕಡೂರು	ಚಿಕ್ಕಮಗಳೂರು	10ನೇ ಡಿಟೋ ,,
ಶಿವಮೊಗ್ಗಾ	ಶಿವಮೊಗ್ಗಾ	15ನೇ ಡಿಟೋ ,,
ಡಿಟೋ	ಸಾಗರ	18ನೇ ಡಿಟೋ ,,
ಡಿಟೋ	ತೀರ್ಥಹಳ್ಳಿ	22ನೇ ಡಿಟೋ ,,

2. ಈ ವರುಷ (i) ಬೆಂಗಳೂರು, ಹಾಸನ, ಕಡೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹಳೇ ತರಹೆ ಪ್ರಕಾರವೂ (ii) ಅಜಮಾಯಿಷಿ ಬಗ್ಯೆ ಮೈಸೂರು ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹೊಸ ಯಾ ಬೊಂಬಾಯಿ ತರಹೆ ಪ್ರಕಾರವೂ ಯುರಡು ವಿಧವಾಗಿ ಸಂದಲನ್ನ ರಾಸು ಮಾಡಿಸಿರುತ್ತೆ.

3. ಇದುವರಿವಿಗೂ ಜಾರಿಯಲ್ಲಿರುವ ಪಜನಿ ಬಟ್ಟುಗಳೇ ಈಗಲೂ ಉಪಯೋಗಿಸಲ್ಪಡುವುವು.

4. ಪ್ರತಿ ಕೋಠಿಯಲ್ಲಿಯೂ ಬಿಕರಿ ಬಗ್ಯೆ ವದಗಿಸಲ್ಪಡುವ ಸಂದಲಿನ ತರಹೆಗಳ ಮೊತ್ತವನ್ನ ಇದರಡಿ ವಿವರಿಸಿದೆ.

ಹಳೇ ತರಹೆ ಪ್ರಕಾರ.													ಹೊಸ ಯಾ ಬೊಂಬಾಯಿ ತರಹೆ ಪ್ರಕಾರ.				
ಸಂದಲ್ ವಿವರ.	ಬೆಂಗಳೂರು ಕೋಠಿ.		ಹಾಸನ ಕೋಠಿ.		ಚಿಕ್ಕಮಗಳೂರು ಕೋಠಿ.		ಶಿವಮೊಗ್ಗಾ ಕೋಠಿ.		ಸಾಗರ ಕೋಠಿ.		ತೀರ್ಥಹಳ್ಳಿ ಕೋಠಿ.		ಸಂದಲ್ ವಿವರ.	ಹುಣಸೂರು ಕೋಠಿ.		ಶ್ರೀರಂಗಪಟ್ಟಣ ಕೋಠಿ.	
	ಟ್ಯ.	ಹ.	ಟ್ಯ.	ಹ.	ಟ್ಯ.	ಹ.	ಟ್ಯ.	ಹ.	ಟ್ಯ.	ಹ.	ಟ್ಯ.	ಹ.		ಟ್ಯ.	ಹ.	ಟ್ಯ.	ಹ.
ಸಲಾಕಿ ಅವ್ವಲ್	1	..	..	5	..	15	..	..	..	15	..	...	ವಿಲಾಯಿತಿ ಬಡ್	1	.	..	10
ಡಿಟೋ ದುಯಂ	..	5	1	5	2	5	3	5	1	..	..	2	ಜೈನಾ ಬಡ್	20	..	30	..
ಡಿಟೋ ಸಿಯಂ	1	10	7	10	5	5	12	15	8	..	4	..	ಪಂಚಂ	28	..	89	..
ಡಿಟೋ ಚಹರಂ	45	15	30	..	44	..	32	10	12	..	7	..	ಚಿಕ್ಕ ಸಲಾಕಿ, ಫೂಟ್ಸ್ (ಅವ್ವಲ್)	3	...	5	..
ಡಿಟೋ ಪಂಚಂ	7	..	10	..	10	10	37	.	25	..	14	..	ಡಿಟೋ (ದುಯಂ)	2	..	1	..
ಚಿಕ್ಕ ಸಲಾಕಿ	1	2	1	..	..	..	..	..	..	..	..	..	ಫೂಟ್ ಬಡಲ	50	..	30	..
ದೊಡ್ಡ ಜಡಾ	21	..	35	..	33	..	66	5	40	..	25	..	ಜಡಾ (ಅವ್ವಲ್)	25	..	25	..
ಚಿಕ್ಕ ಜಡಾ	3	15			5	..	8	..	4	..	2	..	ಡಿಟೋ (ದುಯಂ)	25	..	12	..
ಜಡದ ರಂಬೆ	1	5			7	..	..	..	...	..	...	..	ಡಿಟೋ (ಸಿಯಂ)	20	..	8	..
ದೊಡ್ಡ ಜಜ್ಜ	18	..	61	5	30	..	94	..	65	..	43	..	ಡಿಟೋ (ಚಹರಂ)	7	..	7	..
ಚಿಕ್ಕ ಜಜ್ಜ	3	5			11	..							ಜಜ್ಜ (ಅವ್ವಲ್)	50	...	25	..
ಬಗರದದ್ದು	2	15	6	..	5	5	26	..	9	..	13	10	ಡಿಟೋ (ದುಯಂ)	40	15	15	..
ಇ೯ ವಾಚೆ ಗುಬಗರು	1	..	3	..	..	10	..	..	..	..	..	..	ಬಗರದದ್ದು	5	..	12	..
ಗರಗಸ ಬುಕಣಿ	..	2	..	5	..	10	1	..	..	15	9	..	ಇ೯ ಬಗರು	5	..	14	..
ದೊಡ್ಡ ಇ೯ ಚಿಲ್ಪ	1	10	1	..	6	5	15	10	15	..	16	..	ಚಿರಿಯಾ	5	..	5	..
ಚಿಕ್ಕ ಡಿಟೋ	..	..	2	..	..	..	..	..	..	..	..	...	ಇ೯ ಚಿಲ್ಪ (ಅವ್ವಲ್)	4	..	6	..
ಕೆತ್ತಿ ಇ೯ ಚಿಲ್ಪ	6	..	..	..	..	..	..	..	..	..	..	..	ಡಿಟೋ (ದುಯಂ)	6	..	6	10
ಹತಿ ಚಿಲ್ಪ	1	6	..	..	..	..	..	..	..	..	..	..	ಹತಿ ಚಿಲ್ಪ	1	..	2	10
ಮಿಲ್ಪ ಚಿಲ್ಪ	17	10	30	..	21	5	30	..	12	..	9	..	ಗರಗಸ ಬುಕಣಿ	1	..	..	10
ಬಸೋಲ ಬುಕಣಿ	1	15	10	..	14	..	14	15	5	10	6	8	ಮಿಲ್ಲ ಚಿಲ್ಪ	30	..	50	..
ಕೊಯತ ಚಿಲ್ಪ	..	..	1	10	3	10	9	..	2	..	1	..	ಬಸೋಲಾ ಬುಕಣಿ	7	.	10	..
													ಜೇಗು ಮಿಲ್ಪ	..	..	5	..
													ಕಳೆದವರುಷದ ಜಡಾ	113	15	12	15
													ಸ್ಪೆಷಲ್ ಕ್ಯಾಸ್	..	10	...	..
ಜುಮ್ಲಾ ..	135	15	200	..	200	..	350	..	200	..	150	..	ಟೋಟಲ್ ..	450	..	371	15

5. ಮೈಸೂರು ದೇಕದಲ್ಲಿ ಬಹಿರಂಗವಾಗಿ ಹರಾಜು ಮೂಲಕ ಸಂದಲ್ ಬಿಕರಿ ಮಾಡುವ ಬಗ್ಗೆ ಇದರಡಿ ಕಂಡುಬರುವ ತಿದ್ದುಪಾಟಾದ 1895ನೇ ಇಸವಿ ಮಾರ್ಚಿ ಮಾಹೆ 15ನೇ ಮಾರ್ಕಂ 15230.—ಆರ್. ಎಫ್. 155.—92ನೇ ನಂಬರ್ ರೂಲ್ಸ್‌ಯಾನೆ ನಿಬಂಧನೆಗಳು ಗವರ್ನಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟು ಸರ್ವರ ತಿಳುವಳಿಕೆ ಬಗ್ಗೆ ಫಾಯಿಷ್ ಮಾಡಲ್ಪಟ್ಟಿರುತ್ತವೆ:—

I. ನಡವಳಿತ.

1. ಪ್ರತಿ ಹರಾಜೂ ಆಯಾ ಡಿಸ್ಟ್ರಿಕ್ಟಿನ ಡೆಪ್ಯೂಟಿ ಕಮಿಷ್ಶನರವರಿಂದ ಆಗಲಿ ಅಥವಾ ಅವರಿಂದ ನೊಕರರ್ಮಾಡಲ್ಪಟ್ಟ ಯಿತರ ಆಫಿಸರಿಂದ ಆಗಲಿ ಕೇರಿ ಫಾರೆಸ್ಟ್ ಆಫಿಸರವರಿಂದ ನಡಿಸಲ್ಪಡತಕ್ಕದ್ದು.

2. ಚಡದರಖಾಸ್ತುದಾರನು ಕ್ರಯದಾರನಾಗಿರತಕ್ಕದ್ದು. ಯಾವದಾದರೂ ಒಂದು ಲಾಟಿನ ವಿಷಯದಲ್ಲಿ ತಕರಾರು ವುಂಟಾದರೆ ಡಿಟೋ ಲಾಟು ಪುನಹ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು.

3. ಪ್ರತಿ ಖರೀದೀದಾರನೂ ಒಂದು ಲಾಟನ್ನು ಹರಾಜಿನಲ್ಲಿ ತೆಗದುಕೊಂಡ ಕೂಡ್ಲೆ ಇದಕ್ಕಾಗಿಯೇ ಇಟ್ಟಿರುವ ಬುಕ್ಕಿನಲ್ಲಿ ತಾನು ಖರೀದಿಗೆ ತೆಗದುಕೊಂಡ ಲಾಟಿನ ನಂಬರು ಮತ್ತು ಅದರ ತಪ್ಶೀಲ್ ನಮೂದಿಸಿರತಕ್ಕ ಸ್ಥಳಕ್ಕೆ ಯದುರಾಗಿ ರುಜು ಮಾಡತಕ್ಕದ್ದು. ಹಾಂಗೆ ರುಜು ಮಾಡೋಣದರಿಂದ ಸದರೀ ಲಾಟನ್ನು ಆತನು ಖರೀದಿಗೆ ತೆಗದುಕೊಂಡದ್ದು ಅಂಗೀಕಾರ ಪಟ್ಟಂತೆ ತಿಳಿಯತಕ್ಕದ್ದು. ಈ ರೂಲ್ಸಿನ 6ನೇ ಪ್ಯಾರಾ ಮೇರೆ ಫಾರೆಸ್ಟ್ ಆಫಿಸರವರಿಂದ ತೂಕ ಮಾಡಲ್ಪಡುವ ತನಕ ಹೀಗೆ ವಿಕ್ರಯಿಸಲ್ಪಟ್ಟ ಲಾಟು ಕದಲಿಸದಂತೆ ಇರತಕ್ಕದ್ದು.

II. ಮೊಬಲಗು ಪಾವತಿ ಕ್ರಮ.

4. ಹರಾಜಾದ ಕೂಡ್ಲೆ ಖರೀದೀದಾರನಿಂದ ಬರತಕ್ಕ ಒಟ್ಟು ಮೊಬಲಗು ನಮೂದಿಸಿ ಬಂದು ಯಾದಿಯನ್ನೂ ಮತ್ತು ಡಿಪಾಜಿಟ್ಟು ತಾರೀಖು ಒಟ್ಟು ಮೊಬಲಗಿನ ಮೇಲೆ ಕೇಕಡಾ 25ರಂತೆ ಆಗುವ ಮೊಬಲಗನ್ನು ಆ ಸ್ಥಳದ ತಾಲ್ಲೂಕು ಖಜಾನೆಯಲ್ಲಿ ಆಗಲಿ ಅಥವಾ ಅಂಥಾ ಖಜಾನೆಯಿಲ್ಲದ ಪಕ್ಷದಲ್ಲಿ ಸಮೀಪದಲ್ಲಿರುವ ತಾಲ್ಲೂಕು ಖಜಾನೆಯಲ್ಲಿಯೇ ಆಗಲಿ ಹರಾಜು ತಾರೀಖು ಲಾಗಾಯತು 3 ದಿವಸಗಳೊಳಗಾಗಿ ಕೂಡ್ಲೆ ಪಾವತಿ ಮಾಡಲಿಕ್ಕೆ ಬಂದು ಲೆಟರ್ ಆಫ್ ಅಡ್ವಯಿಸ್ ಯಾನೆ ಮೇಲ್ ಕಾಗದವನ್ನು ಸುದಾ ಪ್ರತಿ ಖರೀದೀದಾರನಿಗೆ ಕೊಡಲ್ಪಡತಕ್ಕದ್ದು. ಡಿಪಾಜಿಟ್ ಮೊಬಲಗಿಗಾಗಿ ಟ್ರೈಜರೀ ಆಫಿಸರರು ಬಂದು ರಸೀದಿಯನ್ನು ಕೊಡತಕ್ಕದ್ದು. ಆ ರಸೀದೀಯನ್ನು 5ನೇ ದಿನ ಆಫೀಸ್ಕರಾಗುವದಕ್ಕೆ ಮುಂಚೆ ಫಾರೆಸ್ಟ್ ಆಫಿಸರವರ ಬಳಿ ಹಾಜರ್ಮಾಡಬೇಕು. ಫಾರೆಸ್ಟ್ ಆಫಿಸರರು ಆ ರಸೀದೀ ಮೇಲೆ ಹಾಜರ್ಮಾಡಲ್ಪಟ್ಟ ತಾರೀಖನ್ನ ಬರೆದು ಅದಕ್ಕೆ ತಮ್ಮ ಚಿಕ್ಕ ಸೈನ್ ಮಾಡತಕ್ಕದ್ದು. ಯಾವ ಖರೀದೀದಾರನಾಗಲಿ ಈ ನಿಬಂಧನೆಗೆ ತಪ್ಪಿನಡದರೆ ಹಾಂಗೆ ತಪ್ಪಿಹೋದ ಕ್ರಯದಾರನಿಂದ ಖರೀದೀ ಮಾಡಲ್ಪಟ್ಟಿದ್ದ ಸಂದಲ್ ಮರವನ್ನು ಪೂರ್ತಿಯಾಗಿ ಯಾಗಲಿ ಯಾ ಅದರ ಪೈಕಿ ಬಂದು ಭಾಗವನ್ನಾಗಲಿ ಕೂಡ್ಲೆ ಮರಳಿ ಹರಾಜು ಮಾಡಿಸಲಿಕ್ಕೆ ಫಾರೆಸ್ಟ್ ಆಫಿಸರರಿಗೆ ಯಖ್ತಿಯಾರಿ ಇರತಕ್ಕದ್ದು. ಹಾಂಗೆ ಮರಳಿ ಹರಾಜು ಮಾಡೋಣದರಿಂದ ವುಂಟಾಗುವ ನಷ್ಟಕ್ಕೆ ಅವ್ವಲ್ ಖರೀದೀದಾರನೇ ಗುರಿಯಾಗಿರತಕ್ಕದ್ದು. ಪರಂತು ಯರ ಜನೇ ಹರಾಜಿನಿಂದ ಉಂಟಾಗುವ ನಫೆಗೆ ಆತನು ಅರ್ಹನಾಗುವದಿಲ್ಲವು. ಹಾಂಗೆ ತಪ್ಪಿ ಹೋದವನಿಂದ ಬರಬೇಕಾದ ಮೊಬಲಗು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡತಕ್ಕದ್ದು. ವಾಡಿಕೆಯಾಗಿ ಭಾರೀ ಖರೀದಿ ಮಾಡುವ ಗಿರಾಕಿಗಳ ಆನುಕೂಲ್ಯಕ್ಕೊಸ್ಕರ ಅಂಥಾವರುಗಳಿಂದ ಟಪ್ಪಾಲ್ ದ್ವಾರಾ ರೆಜಿಸ್ಟರ್ ಲಖೋಟೆ ಮೂಲಕ "ಬೆಂಗಳೂರಲ್ಲಿರುವ ಸ್ಟೇಟ್ ಹುಜೂರು ಟ್ರೈಜರೀ ಆಫಿಸರ ಹೆಸರಿಗೆ" ಮುಂದಾಗಿ ಕಳುಹಿಸಲ್ಪಡುವ ಕರೆನ್ಸೀ ನೋಟುಗಳು ಡಿಪಾಜಿಟ್ ತರೀಕ್ ಅಂಗೀಕರಿಸಲ್ಪಡುತ್ತೆ, ಅಲ್ಲದೆ ಸದರೀ ಆಫಿಸರರ ಹೆಸರಿಗೆ ಮದರಾಸ್ ಬ್ಯಾಂಕ್ ಮೂಲಕ ಕಳುಹಿಸಲ್ಪಡುವ ಅಥವಾ ಮದರಾಸ್ ಬ್ಯಾಂಕಿಗೆ ಪಾವತಿ ಮಾಡಲ್ಪಡುವ ಮೊಬಲಗುಗಳು ಅಂಗೀಕರಿಸಲ್ಪಡುತ್ತವೆ. ಇಂಥಾ ಡಿಪಾಜಿಟ್ಟುಗಳ ದೆಕೆಯಿಂದ ಮರವನ್ನು ಡಿಪಾಜಿಟ್ಟುದಾರರಿಗೆ ಮಾರುವದಕ್ಕಾಗಲಿ ಅಥವಾ ಇತರರಿಗೆ ಯಿಲ್ಲದರಿಯಾಯತೀ ತೋರಿಸುವದಕ್ಕಾಗಲಿ ಅಥವಾ ಅವರುಗಳನ್ನು ಈ ರೂಲ್ಸಿಗೆ ವಳಪಡದಂತೆ ವಿನಾಯಿಸುವದಕ್ಕಾಗಲಿ ಫಾರೆಸ್ಟ್ ಇಲಾಖೆಯವರು ಬದ್ಧರಾಗಿರುವದಿಲ್ಲವು. ಹುಜೂರು ಟ್ರೈಜರೀ ಆಫಿಸರರು ಬಂದಂಥಾ ತಮಾಂ ಡಿಪಾಜಿಟ್ಟುಗಳೂ ಖಜಾನೆಯಲ್ಲಿ ಜಮಾ ಆದ ತಾರೀಖಿನ ದಿವಸವೇ ಆಯಾ ಫಾರೆಸ್ಟ್ ಆಫಿಸರುಗಳಿಗೆ ತಿಳಿಸುವದಕ್ಕೊಸ್ಕರ ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್ ಯವರಿಗೆ ತಿಳಿಸತಕ್ಕದ್ದು. ಮತ್ತು ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ಯವರು ತಿಳಿಸುವ ಪ್ರಕಾರ ಅಂಥಾ ಡಿಪಾಜಿಟ್ಟುಗಳನ್ನು ವ್ಯವಸ್ಥೆ ಮಾಡತಕ್ಕದ್ದು. ಉಪಯೋಗಪಡಿಸಲ್ಪಡದಂಥಾ ಡಿಪಾಜಿಟ್ಟುಗಳು ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ಯವರ ಸರ್ಟಿಫಿಕೇಟಿನ ಮೇಲೆ ಅದಕ್ಕೆ ಸಂಬಂಧಪಟ್ಟ ಜನಗಳಿಗೆ ವಾಪಸ್ ಮಾಡಲ್ಪಡತಕ್ಕದ್ದು.

5. ಪ್ರತಿ ವರ್ತಕನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದಿನ ಮೊಬಲಗು ಹರಾಜು ತಾರೀಖು ಲಾಗಾಯತು 90 ದಿನಗಳೊಳಗಾಗಿ ಪಾವತಿ ಮಾಡಲ್ಪಡತಕ್ಕದ್ದು. ಹಾಂಗೆ ಪಾವತಿ ಮಾಡಲು ತಪ್ಪಿದರೆ ತೇವಣಿ ಕೊಟ್ಟ ಮೊಬಲಗು ಸರ್ಕಾರಕ್ಕೆ ದಾಖಲ್ಮಾಡಲ್ಪಡತಕ್ಕದ್ದು, ಮತ್ತು ಅದು ಪಾವತಿ ಮಾಡಲ್ಪಡಬೇಕಾದ ಮೊಬಲಗು ಪೈಕಿ ಬಂದು ಭಾಗವನ್ನಾಗಿ ಯಂದಿಗೂ ಯಣಿಸಲ್ಪಡಕೂಡದು. ಹಣ ಪಾವತಿಯಾಗದೆ ಇರುವ ಸಂದಲ್ ಮರವು ಪುನಹ ವಿಕ್ರಯಿಸಲ್ಪಡತಕ್ಕದ್ದು. ಪಾವತಿ ಮಾಡಲ್ಪಡಬೇಕಾದ ಮೊಬಲಗು ಕೋಶೀ ಯಿರುವ ತಾಲ್ಲೂಕಿನ ಖಜಾನೆಯಲ್ಲಿ ಆಗಲಿ ಅಥವಾ ಡಿಸ್ಟ್ರಿಕ್ಟು ಖಜಾನೆಯಲ್ಲಿಯೇ ಆಗಲಿ ಖರೀದೀದಾರರು ಇತರ ಯಾವ ಗವರ್ನಮೆಂಟ್ ಟ್ರೈಜರಿಯಲ್ಲಿ ಹಣ ಪಾವತಿ ಮಾಡಬಹುದೆಂದು ಆಪ್ಪಣೆಯಾಗಿರುವ ಸಂದರ್ಭಗಳು ವಿನಹ ಅನ್ಯಥಾ ಮತ್ತಾವ ಖಜಾನೆಯಲ್ಲಿಯೂ ಪಾವತಿ ಮಾಡಲ್ಪಡಕೂಡದು. ಮೇಲೆ ಕಂಡ ಪ್ಯಾರಾ ಅನುಸರಿಸಿ ತೇವಣಿದಾರರು ಪ್ರತಿವಂದು ಕೋಶೆಯಲ್ಲಿ ಕೊಂಡುಕೊಂಡಂಥಾ ಸಂದಲ್ ಮರಗಳಿಗೆ ಕೊಡಬೇಕಾದ ಬಾಕೀ ಹಣವನ್ನ ಹುಜೂರು ಟ್ರೈಜರಿಯಲ್ಲಿ ಪಾವತಿ ಮಾಡಬಹುದು. ಮತ್ತು ಇದಕ್ಕಾಗಿ ಹುಜೂರು ಟ್ರೈಜರಿ ಯಿಂದ ಪಡದಂಥಾ ರಸೀದಿಯು ಹಣ ಪಾವತಿ ಆಯಿತೆಂಬದಾಗಿ ಕ್ರಯಕ್ಕೆ ಕೊಟ್ಟ ಆಫಿಸರವರಿಂದ ಎಣಿಸಲ್ಪಡತಕ್ಕದ್ದು. ಹುಜೂರು ಟ್ರೈಜರೀ ಆಫಿಸರವರು ಆಯಾ ಸಂಬಂಧಪಟ್ಟ ಫಾರೆಸ್ಟ್ ಆಫಿಸರವರಿಗೆ ತಿಳಿಸುವದಕ್ಕೊಸ್ಕರ ಹೀಂಗೆ ಮಾಡಲ್ಪಡುವ ತಮಾಂ ಮೊಬಲಗಿನ ವಿಷಯವಾಗಿ ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ಯವರಿಗೆ ತಿಳಿಸತಕ್ಕದ್ದು.

III. ಸಂದಲ್ ತೂಕ ಮಾಡೋಣ ವ ಪಾಸ್ಸಿಂಗೋಣ.

6. ಪ್ರತಿ ಖರೀದೀದಾರನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದು ಮರಗಳು ಫಾರೆಸ್ಟ್ ಆಫಿಸರಿಂದ ಖುದ್ದಾಗಿಯಾಗಲಿ ಯಾ ಅವರ ಗೈರ್ ಹಾಜರಿಯಲ್ಲಿ ಡೆಪ್ಯೂಟಿ ಕಮಿಷ್ಶನರವರಿಂದ ಗೊತ್ತು ಮಾಡಲ್ಪಟ್ಟ ಇತರ ಆಫಿಸರಿಂದಾಗಲಿ ಖುದ್ದು ತೂಗಿಸಲ್ಪಡ

162

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾಯಿದಾರರ ಹೆಸರು.	ಸ್ವತ್ತಿನ ತಪ್ಪೀಲ್. ಗ್ರಾಮ ಪೈಸಲ್ವ.	ಜೋಡಿ ದಗ್ಗೆರೆ ಪೈಸಲ್ವ.	ನಿಸ್ಸೀರ್.	ಸರಕಾರಕ್ಕೆ ಬರತಕ್ಕ ಜೋಡಿ ನಂಬಲಗು.	ಸರಕಾರಕ್ಕೆ ಬರಬೇಕಾದ ಬಾಕಿ ನಂಬಲಗು.	ಪರಾಜು ತಾರೀಖು.	ಷರಾ.
1	2	3	4	5	6	7	8	9	10	11
			ರಾಮಕೃಷ್ಣಭಟ್ಟ.	ವೃತ್ತಿ 1ಕ್ಕೆ	ಜೋಡಿ	..	ರೂ. ಆ. ಪೈ. 8 8 3	ರೂ. ಆ. ಸೈ. 46 14 9		
				ತಾಕು IV ಬಾಗಾಯತು ಪಡಿ 2.						
				ಪೂರ್ವಕ್ಕೆ — ವೀರಭದ್ರಪ್ಪನ ಮಾನ್ಯ						
				ಪಶ್ಚಿಮಕ್ಕೆ — ಪೋಣಿ						
				ಉತ್ತರಕ್ಕೆ — ನಂಜಪ್ಪನ ಜಮೀನ್						
				ದಕ್ಷಿಣಕ್ಕೆ — ಸೀತಾರಾಮಯ್ಯನ ಜಮೀನ್						
				ತಾಕು V ವಠಾರ.						
				ಪೂರ್ವಕ್ಕೆ — ನಂಜುಂಡಭಟ್ಟರ ವಠಾರ						
				ಪಶ್ಚಿಮಕ್ಕೆ — ಬೀದಿ						
				ಉತ್ತರಕ್ಕೆ — ನಲ್ಲೂರು ನಂಜಪ್ಪನ ವಠಾರ						
				ದಕ್ಷಿಣಕ್ಕೆ — ಸುಬ್ಬಾಭಟ್ಟರ ನಂಜಪ್ಪನ ವಠಾರ						
				ಈ ಮಧ್ಯೆ ರೈತ ವೇಕೆಮುದ್ದ ಇರುವ ಹುಲ್ಲುಮನೆ 2 ಮೂಳಿಗೆಮನೆ 1ನೂ ಸಹ						
				ತಾಕು VI ಜಮೀನ್.						
				ಪೂರ್ವಕ್ಕೆ — ಮಾರಗೊಂಡಹಳ್ಳಿ ಯಲ್ಲೆ						
				ಪಶ್ಚಿಮಕ್ಕೆ — ಅಗರದ ಯಲ್ಲೆ						
				ಉತ್ತರಕ್ಕೆ — ಬಿಳೀಸ್ವಾರ ಯಲ್ಲೆ						
				ದಕ್ಷಿಣಕ್ಕೆ — ಕೌದೇನಹಳ್ಳಿ ಯಲ್ಲೆ						
				ಈ ಮಧ್ಯೆ ಗ್ರಾಮದಲ್ಲಿ ವೃತ್ತಿ ಹಂಚಿಕೆ ಆದ್ದು ಜಾತಾ ಪುಳದ್ದು ದಾಮಾಷಾ ಯಿ ವೇ.ರಿಗೆ ಈ ವೃತ್ತಿಗೆ ಸಲ್ಲತಕ್ಕದ್ದು ಸಹ						
ಬೆಂಗಳೂರು.	ಕೃಷ್ಣರಾಜಪುರ.	ಜೋಡಿ ಕಲ್ಲುಕೆರೆ.	ವೆಂಕಟಸುಬ್ಬಯ್ಯ	ವೃತ್ತಿ 1ಕ್ಕೆ	ಜೋಡಿ	..	8 8 3	31 4 6	ಪರಾಜು ತಾರೀಖು 9ನೇ ಆಗಸ್ಟ್ ಜುಲೈ 27ರಲ್ಲಿ ಜೋಡಿ ರೂಪಾಯಿ 8—8—3	
				ತಾಕು 1ಕ್ಕೆ ಖುಷ್ಕಿ 6 ಕೊಳಗ.						
				ಪೂರ್ವಕ್ಕೆ — ಮಾಗೊಂಡಹಳ್ಳಿ ಯಲ್ಲೆ						
				ಪಶ್ಚಿಮಕ್ಕೆ — ದಂಡು ಸುಬ್ಬಾಶಾಸ್ತ್ರಿ, ನಾರಣಭಟ್ಟರ ಜಮೀನ್						
				ಉತ್ತರಕ್ಕೆ — ಸೂರ್ಯಭಟ್ಟರ ಜಮೀನ್						
				ದಕ್ಷಿಣಕ್ಕೆ — ದಂಡು ಸೂರಶಾಸ್ತ್ರಿ, ಅಶ್ವತ್ಥಭಟ್ಟರ ಜಮೀನ್						
				ತಾಕು II ತರೀ 6 ಕೊಳಗ.						
				ಪೂರ್ವಕ್ಕೆ — ನಾರಣಭಟ್ಟ, ಸುಬ್ಬಾಭಟ್ಟರ ದಳಿ						
				ಪಶ್ಚಿಮಕ್ಕೆ — ಶೇತಾರಾಮಯ್ಯನ ದಳಿ						
				ಉತ್ತರಕ್ಕೆ — ರಾಜಕಾಲ್ವೆ						
				ದಕ್ಷಿಣಕ್ಕೆ — ಸಾರೋಡು ಕಾಲ್ವೆ						
				ತಾಕು III ತರೀ 6 ಕೊಳಗ.						
				ಪೂರ್ವಕ್ಕೆ — ರಾಮಕೃಷ್ಣಭಟ್ಟರ ದಳಿ						
				ಪಶ್ಚಿಮಕ್ಕೆ — ಚಂದ್ರಯ್ಯನ ದಳಿ						
				ಉತ್ತರಕ್ಕೆ — ನಾರಮಳಿ						
				ದಕ್ಷಿಣಕ್ಕೆ — ಬೂಡಿವಿ ಮಿಶೆ						
				ತಾಕು IV ಬಾಗಾಯತು 1 ಪಡಿ.						
				ಪೂರ್ವಕ್ಕೆ — ಕರೇಗವುಪ, ಮುನಿನನ ತೋಪು						
				ಪಶ್ಚಿಮಕ್ಕೆ — ಪಲಿ						
				ಉತ್ತರಕ್ಕೆ — ಮಣಿನ ತೋಟಗಳು						
				ದಕ್ಷಿಣಕ್ಕೆ — ರಾಮಸ್ವಾಮಿ ಕಣ						
				ತಾಕು V ವಠಾರ.						
				ಪೂರ್ವಕ್ಕೆ — ರಾಮಸ್ವಾಮಿಭಟ್ಟರು ಮತ್ತು ಸೂರಿಭಟ್ಟರ ವಠಾರ						
				ಪಶ್ಚಿಮಕ್ಕೆ — ಇನಾಂತಿ ವಠಾರ						
				ಉತ್ತರಕ್ಕೆ — ಬೀದಿ						
				ದಕ್ಷಿಣಕ್ಕೆ — ಸೂರಭಟ್ಟರು, ಅಪ್ಪೂರಾಯಪ್ಪ ಮತ್ತು ಪಾಪಣ್ಣನ ಜಮೀನು						

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೀದಾರರ ಹೆಸರು.	ವೃತ್ತಿಯ ತಪ್ಶೀಲ್. ಖುಷ್ಕಿ ತಪ್ಶೀಲ್.	ಜೋಡಿ ಮನ್ಸೂಕಿ ತಪ್ಶೀಲ್.	ಪೈರ್ಣ.	ಸರ್ಕಾರಕ್ಕೆ ಬರತಕ್ಕ ಜೋಡಿ ಸೊಬಲುಗಳು.	ನರಕಾರಕ್ಕೆ ಬರಬೇಕಾದ ಬಾಕಿ ಸೊಬಲುಗಳು.	ಹರಾಜ್ ತಾರೀಖು.	ಪರಾ.
1	2	3	4	5	6	7	8	9	10	11
							ರೂ. ಆ. ಪೈ.	ರೂ. ಆ. ಪೈ.		
			ವೆಂಕಟಸುಬ್ಬಯ್ಯ	ವೃತ್ತಿ 1ಕ್ಕೆ	ಜೋಡಿ	..	8 8 3	31 4 6		3
				ತಾಕು VI.						
				ಪೂರ್ವಕ್ಕೆ — ಪಾರ್ಸೊಂಜಪ್ಪ ಯಲ್ಲೆ						
				ಪಶ್ಚಿಮಕ್ಕೆ — ಅಗರದಯಲ್ಲೆ						
				ಉತ್ತರಕ್ಕೆ — ಬೀಳೀಸ್ವಾರ ಯಲ್ಲೆ						
				ದಕ್ಷಿಣಕ್ಕೆ — ಕಾಡೇನಹಳ್ಳಿ ಯಲ್ಲೆ						
				ಈ ಮಧ್ಯೆ ಗ್ರಾಮದಲ್ಲಿ ವೃತ್ತಿವಾರು ಹಂಚಿಕೆ ಆದ್ದು ಜಾತಾ ಪುಳಿದ್ದು ದಾಮೂ ಷಾಯಿ ಮೇರಿಗೆ ಈ ವೃತ್ತಿಗೆ ಸಲ್ಲತಕ್ಕದ್ದು ಸಹ						
				ವೃತ್ತಿ 1-1	ಜೋಡಿ	..	2 12 11	6 13 6		
			ರಾಮಲಿಂಗಭಟ್ಟ್ಯ	ತಾಕು I ಖುಷ್ಕಿ ಕೊಳಗ 1—ಬಳ್ಳ 1.						
				ಪೂರ್ವಕ್ಕೆ — ಮಾರಗೊಂಡಹಳ್ಳಿ ಯಲ್ಲೆ						
				ಪಶ್ಚಿಮಕ್ಕೆ — ಸುಬ್ಬಣ್ಣಯ್ಯಗಳ ಜಮೀರ್						
				ಉತ್ತರಕ್ಕೆ — ಜಾನುಭೋಗನ ವೃತಿ.						
				ದಕ್ಷಿಣಕ್ಕೆ — ಅಯ್ಯಪ್ಪಭಟ್ಟರು ಮಗೈರೇರ ಜಮೀರ್						
				ತಾಕು II ತರೀ 5 ಕೊಳಗ.						
				ಪೂರ್ವಕ್ಕೆ — ಉಪ್ಪರಗಡ್ಡಿ ಗದ್ದ						
				ಪಶ್ಚಿಮಕ್ಕೆ — ಹತ್ತು ಬಳ್ಳದ ಹಳ್ಳದಗದ್ದ						
				ಉತ್ತರಕ್ಕೆ — ಆಚೆಕಾಲ್ವೆದಳೆ ಹಂಚಿಕೆ						
				ದಕ್ಷಿಣಕ್ಕೆ — ಈಚೆಕಾಲ್ವೆದಳೆ-ಹಂಚಿಕೆ						
				ತಾಕು III ಪಡಾರ.						
				ಪೂರ್ವಕ್ಕೆ — ದಾರಿ						
				ಪಶ್ಚಿಮಕ್ಕೆ — ಸುಬ್ಬಭಟ್ಟರ ಹಿತ್ತಲು						
				ಉತ್ತರಕ್ಕೆ — ಅಗಸರಮನೆ						
				ದಕ್ಷಿಣಕ್ಕೆ — ಅಯ್ಯಪ್ಪಭಟ್ಟ್ಯ ಸುಬ್ಬಣ್ಣಯ್ಯ ವಡಾರ						
				ತಾಕು IV.						
				ಪೂರ್ವಕ್ಕೆ — ಮಾರಗೊಂಡಹಳ್ಳಿ ಯಲ್ಲೆ						
				ಪಶ್ಚಿಮಕ್ಕೆ — ಅಗರದ ಯಲ್ಲೆ						
				ಉತ್ತರಕ್ಕೆ — ಬೀಳೀಸ್ವಾರ ಯಲ್ಲೆ						
				ದಕ್ಷಿಣಕ್ಕೆ — ಕಾಡೇನಹಳ್ಳಿ ಯಲ್ಲೆ						
				ಈ ಮಧ್ಯೆ ಗ್ರಾಮದಲ್ಲಿ ವೃತ್ತಿವಾರ್ ಹಂಚಿಕೆ ಆದ್ದು ಜಾತಾ ಪುಳಿದ್ದು ದಾಮೂ ಷಾಯಿ ಮೇರಿಗೆ ಈ ವೃತ್ತಿಗೆ ಸಲ್ಲತಕ್ಕದ್ದು ಸಹ						
				ವೃತ್ತಿ 4	ಜೋಡಿ	..	6 6 1	20 0 7		
			ಕೊಮಾರಯ್ಯ	ತಾಕು I ಖುಷ್ಕಿ 4 ಕೊಳಗದ 2 ಬಳ್ಳ.						
				ಪೂರ್ವಕ್ಕೆ — ಅಪ್ಪಾರಾಯಪ್ಪ ವಗೈರೇರ ಜಮೀರ್						
				ಪಶ್ಚಿಮಕ್ಕೆ — ಪುಳ್ಳದ ನರಸಿಂಹಕಾಸ್ಟ್ರ ವಗೈರೇರ ಜಮೀರ್						
				ಉತ್ತರಕ್ಕೆ — ರಾಮಚೆಂದ್ರಯ್ಯನ ಜಮೀರ್						
				ದಕ್ಷಿಣಕ್ಕೆ — ಜಾರಕಬಂಡೆ						
				ತಾಕು II ತರೀ 4 ಕೊಳಗದ 2 ಬಳ್ಳ.						
				ಪೂರ್ವಕ್ಕೆ — ನಂಜುಂಡಭಟ್ಟರ ದಳಿ						
				ಪಶ್ಚಿಮಕ್ಕೆ — ನಂಜಪ್ಪನ ದಳಿ						
				ಉತ್ತರಕ್ಕೆ — ಸಾರೋಡು ಕಾಲ್ವೆ						
				ದಕ್ಷಿಣಕ್ಕೆ — ಸೂರಭಟ್ಟರ ದಳಿ						

ಬೆಂಗಳೂರು. ಹೆಚ್ಚಿನ ರಾಜಸ್ವರ. ಜೋಡಿ ಕಲ್ಲುಕೆರೆ.

ಹರಾಜ್ ತಾರೀಖು 96ನೇ ಇಸವಿ ಜುಲೈ 27ರಲ್ಲು ಜೋಡಿ ರೂಪಾಯಿ 2—12—11

ಜೋಡಿ ರೂಪಾಯಿ 8—8—3

164

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಭೂತೀ ತಪ್ಸೀಲ್.	ಜೋಡೀ ದನ್ಸೆ ತಪ್ಸೀಲ್.	ಬಿನ್ನಣ.	ಸರಕಾರಕ್ಕೆ ಬರತಕ್ಕ ಜೋಡೀ ನೊಬಲಗೆ.	ಸರಕಾರಕ್ಕೆ ಬರಬೇಕಾದ ಬಾಕೀ ನೊಬಲಗೆ.	ಹರುಜ ತಾರೀಖು.	ಪುರು.
1	2	3	4	5	6	7	8	9	10	11
							ರೂ. ಆ. ಪೈ.	ರೂ. ಆ. ಪೈ.		
			ಕೊಮಾರಯ್ಯ	ವೃತ್ತಿ ಪಟ್ಟಿ	ಜೋಡಿ	..	6 6 1	20 0 7		
				ತಾಕು III ತರೀ 4 ಕೊಳಗದ 2 ಬಳ್ಳ.						
				ಪೂರ್ವಕ್ಕೆ —ಒಟ್ಟುದಳಿ						
				ಪಶ್ಚಿಮಕ್ಕೆ —ಸೂರಿಭಟ್ಟರ ದಳಿ						
				ಉತ್ತರಕ್ಕೆ —ಕರೀಗವುಡನಗದ್ದೆ						
				ದಕ್ಷಿಣಕ್ಕೆ —ಬೂಡಿದಿ ಮಿತೆ						
				ತಾಕು IV ಬಾಗಾಯತು ಪಡಿ 2.						
				ಪೂರ್ವಕ್ಕೆ —ವೀರಭದ್ರನ ಮಾನ್ಯ						
				ಪಶ್ಚಿಮಕ್ಕೆ —ರಾಮಸ್ವಾಮಿಭಟ್ಟನ ಹಿಪ್ಪೇ ಜಮೀನು						
				ಉತ್ತರಕ್ಕೆ —ಸೂರಿಭಟ್ಟನ ಜಮೀನು						
				ದಕ್ಷಿಣಕ್ಕೆ —ನಂಜುಂಡಯ್ಯನ ಜಮೀನು						
				ತಾಕು V ವಠಾರ.						
				ಪೂರ್ವಕ್ಕೆ —ಗ್ರಾಮದ ಜೇಲಿ						
				ಪಶ್ಚಿಮಕ್ಕೆ —ದಾರಿ						
				ಉತ್ತರಕ್ಕೆ —ಕೊಳ್ಳಾಇ ಮುನಿಶಾಮಿ ಮನೆ						
				ದಕ್ಷಿಣಕ್ಕೆ —ಹಜಾಮರ ಮನೆ						
				ತಾಕು VI.						
				ಪೂರ್ವಕ್ಕೆ —ಮಾರಗೊಂಡಹಳ್ಳಿ ಯಲ್ಲೆ						
				ಪಶ್ಚಿಮಕ್ಕೆ —ಆಗರದ ಯಲ್ಲೆ						
				ಉತ್ತರಕ್ಕೆ —ಬಿಳೇಸ್ವಾರ ಯಲ್ಲೆ						
				ದಕ್ಷಿಣಕ್ಕೆ —ಕಾದೇನಹಳ್ಳಿ ಯಲ್ಲೆ						
ಕೆಂಗಳೂರು.	ಹೈವ್ಯಾರಾಪಟ್ಟಣ.	ಜೋಡೀ ಕಲ್ಲುಪಾಳ್ಯ.		ಈ ಮಧ್ಯೆ ಗ್ರಾಮದಲ್ಲಿ ವೃತ್ತಿವಾರ್ ಹಂಚಿಕೆ ಆದ್ದು ಜಾತಾ ಪುಳದ್ದು ದಾಮಾ ಷಾಯಿ ಮೇರಿಗೆ ಈ ವೃತ್ತಿಗೆ ಸಲ್ಲತಕ್ಕದ್ದು ಸಹ					1896ನೇ ಇಸವಿ ಜುಲೈ 27ದ್ದು.	6—6—1
			ಐವರಖಂಡಪುರದ ರಾ ಮಕೃಷ್ಣಯ್ಯ	ವೃತ್ತಿ ಪಟ್ಟಿ	ಜೋಡಿ	..	6 6 1	23 7 4		
				ತಾಕು I ಖುಷ್ಕಿ ಕೊಳಗ 4½.						
				ಪೂರ್ವಕ್ಕೆ —ಮಾರಗೊಂಡಹಳ್ಳಿ ಯಲ್ಲೆ						
				ಪಶ್ಚಿಮಕ್ಕೆ —ಕಾಲ್ವೆ						
				ಉತ್ತರಕ್ಕೆ —ಶಾನುಭೋಗ ನಂಜಪ್ಪನ ವೃತ್ತಿ						
				ದಕ್ಷಿಣಕ್ಕೆ —ಗಂಗಾಧರಯ್ಯ, ಸೀತಾರಾಮಯ್ಯನ ಜಮೀನ್						
				ತಾಕು II ತರೀ ಕೊಳಗ 6.						
				ಪೂರ್ವಕ್ಕೆ —ಸೀತಾರಾಮಯ್ಯನ ದಳಿ						
				ಪಶ್ಚಿಮಕ್ಕೆ —ರಾಮಚಂದ್ರಯ್ಯನ ದಳಿ						
				ಉತ್ತರಕ್ಕೆ —ರಾಜಕಾಲ್ವೆ						
				ದಕ್ಷಿಣಕ್ಕೆ —ಉಪ್ಪಾರಹಟ್ಟಿಗದ್ದೆ						
				ತಾಕು III ತರೀ ಕೊಳಗ 6.						
				ಪೂರ್ವಕ್ಕೆ —ಸೀತಾರಾಮಯ್ಯ, ಗಂಗಾಧರಯ್ಯನ ದಳಿ						
				ಪಶ್ಚಿಮಕ್ಕೆ —ಸುಬ್ಬಭಟ್ಟರ ದಳಿ						
				ಉತ್ತರಕ್ಕೆ —ನಾರಿಮಳಿ						
				ದಕ್ಷಿಣಕ್ಕೆ —ಬೂಡಿದಿ ಗಡ್ಡೆ						
				ತಾಕು IV ವಠಾರ.						
				ಪೂರ್ವಕ್ಕೆ —ಮಾರಗೊಂಡಹಳ್ಳಿ ಯಲ್ಲೆ						
				ಪಶ್ಚಿಮಕ್ಕೆ —ಆಗರದ ಯಲ್ಲೆ						
				ಉತ್ತರಕ್ಕೆ —ಬಿಳೇಸ್ವಾರ ಯಲ್ಲೆ						
				ದಕ್ಷಿಣಕ್ಕೆ —ಕಾದೇನಹಳ್ಳಿ						
				ಈ ಮಧ್ಯೆ ಗ್ರಾಮವಲ್ಲಿ ವೃತ್ತಿವಾರ್ ಹಂಚಿಕೆ ಆದ್ದು ಜಾತಾ ಪುಳ್ಳದ್ದು ದಾಮಾ ಷಾಯಿ ಮೇರಿಗೆ ಈ ವೃತ್ತಿಗೆ ಶೇರತಕ್ಕದ್ದು ಸಹ						

165

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಜಾತಿ ತಪ್ಸೀಲ್.	ಜೋಡಿ ನೆಂಬರ್ ತಪ್ಸೀಲ್.	ವಿಸ್ತೀರ್ಣ.	ಸರಕಾರಕ್ಕೆ ಬರಬೇಕಾದ ಜೋಡೀ ಕೊಬಲಿಗಳು.	ಸರಕಾರಕ್ಕೆ ಬರಬೇಕಾದ ಬಾಕಿ ಕೊಬಲಿಗಳು.	ಹರಾಜು ತಾರೀಖು.	ಷರಾ.
1	2	3	4	5	6	7	8	9	10	11
			ರಾಮಯ್ಯನ ಹೆಂಡತಿ ಶೀತಮ್ಮ	ವೃತ್ತಿ I	ಜೋಡಿ	..	ರೂ. ಆ. ಪೈ. 8 8 3	ರೂ. ಆ. ಪೈ. 20 13 8		
				ತಾಕು I ಖುಷ್ಕಿ 3 ಕೊಳಗ.						
				ಪೂರ್ವಕ್ಕೆ —ನಂಜಪ್ಪನ ಜಮೀನು						
				ಪಶ್ಚಿಮಕ್ಕೆ —ಮುನಿಶಾಮಿಗೌ ಜಮೀನು						
				ಉತ್ತರಕ್ಕೆ —ಗಂಗಾಧರಯ್ಯನ ಜಮೀನು						
				ದಕ್ಷಿಣಕ್ಕೆ —ಅಪ್ಪೂರಾಯಪ್ಪನ ಜಮೀನು						
				ತಾಕು II ಖುಷ್ಕಿ ಕೊಳಗ 3.						
				ಪೂರ್ವಕ್ಕೆ —ಅಪ್ಪೂರಾಯಪ್ಪನ ಜಮೀನು						
				ಪಶ್ಚಿಮಕ್ಕೆ —ಕೊಮಾರಯ್ಯನ ಜಮೀನು						
				ಉತ್ತರಕ್ಕೆ —ಅಪ್ಪೂರಾಯಪ್ಪನ ಜಮೀನು						
				ದಕ್ಷಿಣಕ್ಕೆ —ಜಾರಕಬಂಡೆ						
				ತಾಕು III ತರೀ 12 ಕೊಳಗ.						
				ಪೂರ್ವಕ್ಕೆ —ಅಮಾನೀ ಹುಣ್ಣಿನ ಅಚೆಕೆರೆ						
				ಪಶ್ಚಿಮಕ್ಕೆ —ನೀರಗಂಟಿ ಇನಾಂತಿ, ರಾಮಚಂದ್ರಯ್ಯನ ಜಮೀನು						
				ಉತ್ತರಕ್ಕೆ —ರಾಮಾಪಂಡಿತ ವಗೈರೇರ ಜಮೀನು						
				ದಕ್ಷಿಣಕ್ಕೆ —ನಾರಿವಾಳ						
				ತಾಕು IV ಖುಷ್ಕಿ ಪಡಿ 2.						
				ಪೂರ್ವಕ್ಕೆ —ಶಾಮರಾಯರ ಕಣ್ಣು, ಕೃಷ್ಣರಾಜಪುರದ ದಾರಿ						
				ಪಶ್ಚಿಮಕ್ಕೆ —ದಂಡಿನ ದಾರಿ						
				ಉತ್ತರಕ್ಕೆ —ನಿಲುಕಲ್ಲು						
				ದಕ್ಷಿಣಕ್ಕೆ —ಶಾಮರಾಯರ ಕಣ ಮತ್ತು ನಂಜಪ್ಪನ ಕಣ						
				ತಾಕು V ವಠಾರ.						
				ಪೂರ್ವಕ್ಕೆ —ಪಜಾಮರ ಮನೆ						
				ಪಶ್ಚಿಮಕ್ಕೆ —ಗಂಗಾಧರಯ್ಯ, ಶೀತಾರಾಮಯ್ಯನ ವಠಾರ						
				ಉತ್ತರಕ್ಕೆ —ಬೀದಿ						
				ದಕ್ಷಿಣಕ್ಕೆ —ಓಲಿ						
				ತಾಕು VI						
				ಪೂರ್ವಕ್ಕೆ —ಘಾರಗೊಂಡಹಳ್ಳಿ ಯಲ್ಲೆ						
				ಪಶ್ಚಿಮಕ್ಕೆ —ಅಗರದ ಯಲ್ಲೆ						
				ಉತ್ತರಕ್ಕೆ —ಬೆಳೇನ್ಯಾರ ಯಲ್ಲೆ						
				ದಕ್ಷಿಣಕ್ಕೆ —ಕೊಡೇನಹಳ್ಳಿ ಯಲ್ಲೆ						
				ಈ ಮುಟ್ಟ್ಯೂ ಗ್ರಾಮವಲ್ಲಿ ವೃತ್ತಿವಾರ್ ಹಂಚಿಕೆ ಆದ್ದು ಜಾತಾ ವುಳದ್ದುದಾಮೂ ಷ ಯಿ ವೀರಿಗೆ ಈ ವೃತ್ತಿಗೆ ಸಲ್ಲತಕ್ಕದ್ದು ಸಹ						

ಬೆಂಗಳೂರು. ಕೃಷ್ಣರಾಜಪುರ. ಜೋಡಿ ಕಲ್ಲೂಕೆರೆ.

ಹರಾಜು ತಾರೀಖು 1896ನೇ ಇಸವಿ ಜುಲೈ 27ರಲ್ಲು
ಜೋಡಿ ರೂಪಾಯಿ 8—8—3

ಕೆ. ಶ್ರೀನಿವಾಸರಾವ್,
ಫೂರ್ ಡೆಪ್ಯೂಟಿ ಕಮ್ಮಿಷನರ್.

ಕೋಲಾರ ಡಿಸ್ಟ್ರಿಕ್ಟು.

ಇನ್ಸ್ಟಾರ್ ನಾಮೆ.

ಬವರಿಂಗ್‌ಪೇಟೆ ತಾಲ್ಲೂಕು ಕಚೇರಿಯಿಂದ.

ತಾರೀಖು 10ನೇ ಜೂನ್ 1896.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಇದರಡಿ ಕಂಡ ಬವರಿಂಗ್‌ಪೇಟೆ ತಾಲ್ಲೂಕಿನ ಗ್ರಾಮಗಳ ಬಳಿಯಣ ಬಂಜರು ಜಮೀನಿನ ಬಂಡೆಗಳಲ್ಲಿ ಕೊಮಿದು ಸಾಗಿಸುವ ಬಗ್ಗೆ ಸ|| 1896ನೇ ಇಸವಿ ಜುಲೈ 2ನೇ ತಾರೀಖು ದಿವಿ 11 ಘಂಟೆಗೆ ಹರಾಜ್ ಮಾಡಲ್ಪಡುತ್ತೆ.